156 ನೇ ೬
ನಿ=330
(69)
4RK

# ಕರ್ನಾಟಕ ವಿಧಾನಪರಿಷತ್‌ನ ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡ ಇವರು ನಿಯಮ-330ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ

**ಸೂಚನೆ:-**

ಕರ್ನಾಟಕ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ರೆವಿನ್ಯೂ ಇಲಾಖೆಯ ಭೂ ಸುರಕ್ಷಾ ಹಾಗೂ ಇತರೆ ಇತ್ತೀಚಿನ ಯೋಜನೆಗಳು ಜನರಿಗೆ ಸ್ವಲ್ಪ ಮಟ್ಟಿಗೆ ನೆಮ್ಮದಿಯನ್ನು ಒದಗಿಸಿವೆ. ಇಷ್ಟರ ಮಟ್ಟಿಗೆ ರೆವಿನ್ಯೂ ಇಲಾಖೆಯು ಶ್ಲಾಘನೀಯವಾಗಿರುತ್ತದೆ. ಟಿಪ್ಪು ಸುಲ್ತಾನ್ ಕಾಲದಿಂದ ಮತ್ತು ರೆವಿನ್ಯೂ ಸರ್ವೇ 1863 ರಿಂದ ಇಲ್ಲಿಯವರೆಗೂ ಸರ್ಕಾರವು ಜಮೀನುಗಳನ್ನು ಉಳುಮೆ ಮಾಡುವ ಬಡ ರೈತರಿಗೆ, ಧೀನ ದಲಿತರಿಗೆ, ನೊಂದವರಿಗೆ ಮಂಜೂರು ಮಾಡುತ್ತಾ ಬಂದಿರುತ್ತದೆ. ಸದರಿ ಜಮೀನುಗಳನ್ನು ಮಂಜೂರುದಾರರು ವ್ಯವಸ್ಯಾಯ ಮಾಡುತ್ತಾ ಬಂದಿರುತ್ತಾರೆ. ಆದರೆ ರೈತರುಗಳ ಜಮೀನನ್ನು ಬೇರೆಯವರಿಗೆ ಪರಭಾರೆ ಮಾಡಲು ಜಮೀನಿನ ಮೂಲ ಮಂಜೂರು ದಾಖಲೆಯ ಓ.ಎಮ್ (ಕಚೇರಿ ಆದೇಶ) ನ ಪ್ರತಿ ಮತ್ತು ರೆವಿನ್ಯೂ ನಕ್ಷೆ ಅವಶ್ಯವಿರುತ್ತದೆ. ಆದರೆ ಇದನ್ನು ರೆವಿನ್ಯೂ ಇಲಾಖೆಯು ಸರಿಯಾಗಿ ನಿರ್ವಹಣೆ ಮಾಡದಲೇ ಇರುವುದರಿಂದ ತುಂಬಾ ತೊಂದರೆಯಾಗಿರುತ್ತದೆ. ಉದಾಹರಣೆಗೆ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು ಕಸಬಾ ಹೋಬಳಿ ಬೈರನಹಳ್ಳಿ ಗ್ರಾಮದ ಸರ್ವೇ ನಂ ಹಳೇ ನಂ 81 ರಲ್ಲಿ 1920 ರಿಂದ 1960 ರ ವರೆಗೆ ಯಾರು ಯಾರಿಗೆ ಮಂಜೂರು ಮಾಡಲಾಗಿದೆ ಇದಕ್ಕೆ ಸಂಬಂಧಪಟ್ಟಂತಹ ಓ.ಎಮ್ (ಕಚೇರಿ ಆದೇಶ) ನ ಪ್ರತಿ ಹಾಗೂ ರೆವಿನ್ಯೂ ನಕ್ಷೆ ನೀಡಬೇಕೆಂದು ಕೋರುತ್ತಾ ಯಾವ ರೀತಿಯ ಜಮೀನುಗಳನ್ನು ಸರ್ಕಾರ ಮಂಜೂರು ಮಾಡಲಾಗುತ್ತದೆ. ಇದರ ಪ್ರಕ್ರಿಯೆಗಳೇನು ಎಂಬುದರ ಪೂರ್ತಿ ವಿವರಣೆಯೊಂದಿಗೆ ಮಾಹಿತಿ ಒದಗಿಸಬೇಕೆಂದು ಕೋರುತ್ತಾ ರಾಜ್ಯದ ಎಲ್ಲಾ ಕಡೆ ಮೂಲ ಮಂಜೂರು ದಾಖಲೆಯ ಓ.ಎಮ್ (ಕಚೇರಿ ಆದೇಶ) ನ ಪ್ರತಿ ಮತ್ತು ರೆವಿನ್ಯೂ ನಕ್ಷೆಗಳನ್ನು ಸಂರಕ್ಷಿಸಿ ಇಡಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸದನದಲ್ಲಿ ಮಂಡಿಸುತ್ತೇನೆ.

******

**ಹೇಳಿಕೆ:**

- ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಬೈರನಹಳ್ಳಿ, ಗ್ರಾಮದ ಮೂಲತಃ ಗೋಮಾಳ ಸ.ನಂ 10 ರಲ್ಲಿ ಶ್ರೀ ಹುಚ್ಚಪ್ಪ ಎ ಕೆ ರವರಿಗೆ ಮಂಜೂರಾಗಿದ್ದು, ದುರಸ್ತಿಯಂತೆ ಹೊಸ ಸ.ನಂ 81 ನಮೂದಾಗಿರುತ್ತದೆ.
- ಬೈರನಹಳ್ಳಿ ಗ್ರಾಮದ ಸ.ನಂ 10 ರಲ್ಲಿ ಒಟ್ಟು 57 ಜನರಿಗೆ ದರಖಾಸ್ತು ಮೂಲಕ ಮಂಜೂರಾಗಿರುತ್ತದೆ.

- ಪ್ರಸ್ತಾಪಿತ ಜಮೀನಿನಲ್ಲಿ ಮಂಜೂರಿಯಾಗಿರುವ ಮೂಲ ಮಂಜೂರಿ ಕಡತಗಳು ಲಭ್ಯವಿರುವುದಿಲ್ಲವಾದ್ದರಿಂದ ಕಛೇರಿ ಆದೇಶ ಮತ್ತು ರೆವಿನ್ಯೂ ನಕ್ಷೆ ಸಾಧ್ಯವಾಗುತ್ತಿರುವುದಿಲ್ಲ.
- ಪ್ರಸ್ತಾಪಿತ ಸ.ನಂ 81 ರ ಕರ್ದಾ ಪ್ರತಿ ಮತ್ತು ಟಿಪ್ಪಣಿ ಲಭ್ಯವಿರುವುದಿಲ್ಲ. ಲಭ್ಯವಿರುವ ಆಕಾರ ಬಂದ್ ಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
- ಸರ್ಕಾರಿ ಗೋಮಾಳ, ಸರ್ಕಾರಿ ಖರಾಬ್, ಆಕಾರ ಕಂಡ ಬಂಜರು, ಜಮೀನುಗಳನ್ನು ಮಂಜೂರು ಮಾಡಲಾಗುತ್ತಿದೆ.
- ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1966 ರ ನಿಯಮಗಳು 97 (4) ರನ್ವಯ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ ಆರ್ ಡಿ 02 ಎಲ್.ಜಿ. ಪಿ 2021 ರ ದಿನಾಂಕ: 30/01/2021 ಮತ್ತು ಆರ್.ಡಿ 45 ಎಲ್.ಜಿ.ಪಿ. 2023,ದಿನಾಂಕ:01/12/2023 ನಿರ್ದೇಶನಗಳನ್ವಯ ಅನಧೀಕೃತ ಸಾಗುವಳಿ ಸಕ್ರಮೀಕರಣ ಯೋಜನೆಯಡಿ ನಿಗಧಿತ ಅವಧಿಯಲ್ಲಿ ಸಲ್ಲಿಸಲ್ಪಟ್ಟ ನಮೂನೆ, 50, 53 ಹಾಗೂ 57 ರ ಅರ್ಜಿಗಳನ್ನು ಗ್ರಾಮ ಆಡಳಿತ ಅಧಿಕಾರಿ ರಾಜಸ್ವ ನಿರೀಕ್ಷಕರು ಕ್ಷೇತ್ರ ಪರಿಶೀಲನೆ ನಡೆಸಿ ಪೂರಕ ದಾಖಲೆಗಳೊಂದಿಗೆ ಭೂ ಲಭ್ಯತೆಯನ್ನು ಅನುಸರಿಸಿ ಪ್ರಸ್ತಾವನೆ ಸಲ್ಲಿಸುವಂತೆ ತಾಲ್ಲೂಕು ಕಛೇರಿಯಲ್ಲಿ ವಿಷಯ ನಿರ್ವಾಹಕರು, ಶಿರಸ್ತೇದಾರರು ಕಛೇರಿ ಟಿಪ್ಪಣಿ ದಾಖಲಿಸಿ ಮಂಡಿಸುವಂತೆ ತಹಶೀಲ್ದಾರ್ ರವರು ತಾಲ್ಲೂಕು ಬಗರ್ ಹುಕುಂ ಸಕ್ರಮೀಕರಣ ಸಮಿತಿಗೆ ಮಂಡಿಸಿದ ನಂತರದಲ್ಲಿ ಸದರಿ ಸಮಿತಿಯು ಅನುಮೋದಿಸಿದಲ್ಲಿ, ಅರ್ಜಿದಾರರಿಗೆ ಕಿಮ್ಮತ್ತು ಪಾವತಿಸಲು ನೋಟೀಸು ನೀಡಿ, ಕಿಮ್ಮತ್ತನ್ನು ಸರ್ಕಾರಕ್ಕೆ ಪಾವತಿಸಿದ ನಂತರದಲ್ಲಿ ಸಾಗುವಳಿ ಚೀಟಿ ವಿತರಿಸಿ ಪಹಣಿ ದಾಖಲೆಗಳಲ್ಲಿ, ನಮೂದಿಸಲು ಕ್ರಮವಹಿಸಬೇಕಾಗಿರುತ್ತದೆ.
- ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ಹಳೆಯ ಕೈಬರಹದ ಪಹಣಿ ಮೂಲ ಮಂಜೂರಿ ಕಡತಗಳನ್ನು ಭೂ ಸುರಕ್ಷಾ ಯೋಜನೆಯಡಿ ಸ್ಕ್ಯಾನ್ ಮಾಡಿ ತಂತ್ರಾಂಶದಲ್ಲಿ ಅಪ್ ಲೋಡ್ ಮಾಡಿ ಸಂರಕ್ಷಿಸಲು ಕ್ರಮವಹಿಸಲಾಗುತ್ತಿರುತ್ತದೆ.

**ಸಂಖ್ಯೆ**: ಆರ್‌ಡಿ 168 ಎಲ್‌ಜಿಕ್ಯೂ 2025

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**